**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ18-06-2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎನ್ ವಕೀಲರಿಂದ**

ನಿ ಡಿ 4 ದಾಖಲಾತಿ ವಿವಾಹ ನೋಟೀಸ ಆಗಿದ್ದು, ಮದುವೆ ಆಗಿರುವ ಬಗ್ಗೆ ಇರುವುದಿಲ್ಲ ಎಂದರೆ ಸರಿ. ನಿ ಡಿ 4 ಮದುವೆ ನೋಂದಣಿ ಪ್ರಮಾಣ ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮದುವೆ ನೋಂದಣಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಿ ಡಿ 4 ರಲ್ಲಿ ಅನಿಲ್ ಕುಮಾರ ಮತ್ತು ಪಾರ್ವತಿ ಎಂದು ನಮೂದಾಗಿದೆ ಎಂದರೆ ಸರಿ. ಪಾವನಾ ಮತ್ತು ಪಾರ್ವತಿ ಇಬ್ಬರು ಒಬ್ಬರೇ ಎಂದು ನಿ ಡಿ 4 ರಲ್ಲಿ ನಮೂದಾಗಿಲ್ಲ ಎಂದರೆ ಸರಿ. ನಾನು ಬೇರೆ ವ್ಯಕ್ತಿಗಳಿಗೆ ಸಂಬಂಧಪಟ್ಟ ಮದುವೆಯಾಗಿರದ ಒಂದು ಮದುವೆ ನೋಟೀಸನ್ನು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಪಾವನಾ ಅಲಿಯಾಸ್ ಪಾರ್ವತಿ ಯವರು ಇನ್ನೂ ಜೀವಂತವಾಗಿದ್ದಾರೆ. ಅವರನ್ನು ನ್ಯಾಯಾಲಯದ ಮುಂದೆ ಸಾಕ್ಷ್ಯ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ.

ನಿ ಡಿ 5 ಮತ್ತು 6 ದಾಖಲಾತಿ ಗಳು ವಾದಿ ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿರುವ ದಾಖಲಾತಿ ಎಂದರೆ ಸರಿ. ಅವುಗಳನ್ನು ನಾನು ಏಕೆ ಹಾಜರುಪಡಿಸಿರುತ್ತೇನೆಂದು ಗೊತ್ತಿಲ್ಲ ನನ್ನ ವಕೀಲರನ್ನು ಕೇಳಬೇಕು. ನಿ ಡಿ 6 ಪ್ರಕರಣದ ಆದೇಶ ಪುಟದ ಪ್ರತಿಯನ್ನು ಹಾಜರುಪಡಿಸಿಲ್ಲ. ನನ್ನನ್ನು ಬಿಡುಗಡೆಗೊಳಿಸುವಂತೆ ಹೂಡಿದ ಅರ್ಜಿ ವಜಾ ಆಗಿರುವುದರಿಂದ ನಾನು ಅದರ ಆದೇಶವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಕಾರಣ ಇಲ್ಲದೇ ನಾನು ನಿ ಡಿ 5 ಮತ್ತು 6 ದಾಖಲಾತಿಗಳನ್ನು ವಿನಕಾರಣ ನೀಡಿರುತ್ತೇನೆಂದರೆ ಸರಿಯಲ್ಲ. ಈ ದಾವೆಗೆ ಸಂಬಂಧ ಇಲ್ಲದ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**